UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Saturday
17-10-2026

ಅಮೆರಿಕ: 30 ಸಾವಿರ ಭಾರತೀಯ ಕೃಷಿ ಕಾರ್ಮಿಕರಿಗೆ ಸಂಕಷ್ಟ

ವಾಷಿಂಗ್ಟನ್: ಅಮೆರಿಕದಲ್ಲಿ ಮಧ್ಯಂತರ ಚುನಾವಣೆಗೂ ಮುನ್ನವೇ 'ಇಮ್ಮಿಗ್ರೇಷನ್ ಆ್ಯಂಡ್ ಕಸ್ಟಮ್ಸ್ ಎನ್‌ಫೋರ್ಸ್‌ಮೆಂಟ್' (ಐಸಿಇ) ಇಲಾಖೆಯು ವಲಸಿಗರ ವಿರುದ್ಧ ಕಠಿಣ ಕ್ರಮ ಮುಂದುವರಿಸಿದೆ. ಇದು ಸಾವಿರಾರು ಭಾರತೀಯ ಕೃಷಿ ಕಾರ್ಮಿಕರಿಗೆ ಸಂಕಷ್ಟ ತಂದೊಡ್ಡಿದೆ.

ಐಸಿಇ, ಅಮೆರಿಕದಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ವಲಸಿಗರ ವಿರುದ್ಧ ವ್ಯಾಪಕ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದ್ದು, ಇದು ಸಾವಿರಾರು ಕೃಷಿ ಕಾರ್ಮಿಕರ ಮೇಲೆ ಪರಿಣಾಮ ಬೀರಿದೆ. ಹೀಗಾಗಿ, ಕ್ಯಾಲಿಫೋರ್ನಿಯಾದಿಂದ ಕನ್ಸಾಸ್‌ವರೆಗೆ ಸಾವಿರಾರು ಎಕರೆಗಟ್ಟಲೆ ಕೃಷಿ ಭೂಮಿಯಲ್ಲಿ ಚಟುವಟಿಕೆಗಳು ತಗ್ಗಿವೆ. ಅಮೆರಿಕದಲ್ಲಿ ಅಗತ್ಯ ವಲಸೆ ದಾಖಲೆಗಳಿಲ್ಲದೇ ವಾಸಿಸುತ್ತಿರುವ ಸುಮಾರು 7.50 ಲಕ್ಷ ಭಾರತೀಯರಲ್ಲಿ ಸುಮಾರು 1 ಲಕ್ಷ ಜನರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಈ ಪೈಕಿ ಕ್ಯಾಲಿಫೋರ್ನಿಯಾ ರಾಜ್ಯವೊಂದರಲ್ಲಿಯೇ ಬದುಕು ಕಟ್ಟಿಕೊಂಡಿದ್ದ 30,000 ಭಾರತೀಯ ಕೃಷಿ ಕಾರ್ಮಿಕರು ಈಗ ಉದ್ಯೋಗ ತೊರೆದು ಬಲವಂತದಿಂದ ಸ್ಥಳಾಂತರಗೊಂಡಿದ್ದಾರೆ ಎಂದು ವರದಿಯಾಗಿದೆ. ಕೆಲವು ಕೃಷಿ ಕಾರ್ಮಿಕರು ಮೆಕ್ಸಿಕೊದತ್ತ ಮುಖ ಮಾಡಿದ್ದಾರೆಂದು ತಿಳಿದುಬಂದಿದೆ.

V-karnataka pg 05

Viswavani pg 10

ದೇಶಿ ತಳಿಗಳಿಂದ ಆಧುನಿಕ ಕೃಷಿ ತಂತ್ರಜ್ಞಾನದವರೆಗೆ ರೈತರ ಗಮನ ಸೆಳೆಯುವ ಮೇಳ | ಕೃಷಿ, ಪಶುಸಂಗೋಪನೆ ಲೋಕ ಅನಾವರಣ

ರೈತ ದಸರಾ ಕೃಷಿ ವಸ್ತು ಪ್ರದರ್ಶನ, ವಿಧ್ಯುಕ್ತ ಆರಂಭ

ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರೈತ ದಸರಾ ಅಂಗವಾಗಿ ನಗರದ ಜೆ.ಕೆ. ಮೈದಾನದ ಆವರಣದಲ್ಲಿ ಆಯೋಜಿಸಿರುವ ಕೃಷಿ ವಸ್ತು ಪ್ರದರ್ಶನ ರೈತರನ್ನು ಮಾತ್ರವಲ್ಲದೆ ಸಾರ್ವಜನಿಕರ ಗಮನವನ್ನೂ ಸೆಳೆಯುತ್ತಿದೆ. ದೇಶಿ ಜಾನುವಾರು ತಳಿಗಳ ವೈವಿಧ್ಯ, ಸಿರಿಧಾನ್ಯಗಳ ಮಹತ್ವ, ಆಧುನಿಕ ಕೃಷಿ ಯಂತ್ರೋಪಕರಣಗಳು ಹಾಗೂ ಸುಸ್ಥಿರ ಕೃಷಿ ಪದ್ಧತಿಗಳ ಕುರಿತು ಮಾಹಿತಿ ನೀಡುವ ಈ ಪ್ರದರ್ಶನ ಕೃಷಿ ಕ್ಷೇತ್ರದ ಸಮಗ್ರ ಚಿತ್ರಣವನ್ನು ತೆರೆದಿಟ್ಟಿದೆ.

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಕೃಷಿ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು. ಕೃಷಿ, ತೋಟಗಾರಿಕೆ, ರೇಷ್ಮೆ ಸೇರಿದಂತೆ ಒಟ್ಟು 19 ವಿವಿಧ ಇಲಾಖೆಗಳ ಮಳಿಗೆಗಳು ಇಲ್ಲಿ ತೆರೆದುಕೊಂಡಿದ್ದು, ಕೃಷಿ ಕ್ಷೇತ್ರದ ಹೊಸ ಸಾಧ್ಯತೆಗಳು ಮತ್ತು ರೈತರಿಗೆ ಉಪಯುಕ್ತವಾದ ಮಾಹಿತಿಗಳನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುತ್ತಿವೆ.



ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಕೃಷಿ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು.

ದೇಶಿ ಜಾನುವಾರುಗಳೇ ಆಕರ್ಷಣೆ: ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯ ಮಳಿಗೆ ಗಮನ ಸೆಳೆಯುತ್ತಿದೆ. ದೇಶಿ ತಳಿಯ ಹಳ್ಳಿಕಾರ್ ಜಾನುವಾರುಗಳು, ಬಂಡೂರು ಕುರಿಗಳು, ನಾಟಿಕೋಳಿ ಹಾಗೂ ಮುರ್ರಾ ಎಮ್ಮೆಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ವಿಶೇಷವಾಗಿ ಹಳ್ಳಿಕಾರ್ ತಳಿಯ ಜಾನುವಾರುಗಳು, ಬಂಡೂರು ಕುರಿಗಳು, ನಾಟಿಕೋಳಿ ಹಾಗೂ ಮುರ್ರಾ ಎಮ್ಮೆಯ ಪ್ರದರ್ಶನವು ವೀಕ್ಷಕರಲ್ಲಿ ಕುತೂಹಲ ಮೂಡಿಸಿದೆ.

ಹವಾಮಾನ ವೈಪರೀತ್ಯಕ್ಕೆ ಪರ್ಯಾಯ ಬೆಳೆಗಳ ಮಾಹಿತಿ: ಕೃಷಿ ಕ್ಷೇತ್ರ ಇಂದು ಹವಾಮಾನ ವೈಪರೀತ್ಯ, ಮಣ್ಣಿನ ಗುಣಮಟ್ಟ ಹಾಗೂ ಕೃಷಿ ಉತ್ಪಾದನಾ ವೆಚ್ಚ ದಂತಹ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆ ತನ್ನ ಮಳಿಗೆಯಲ್ಲಿ ರಸಗೊಬ್ಬರಗಳ ಅತಿಯಾದ ಬಳಕೆಯಿಂದ ಉಂಟಾಗಬಹುದಾದ ದುಷ್ಪರಿಣಾಮಗಳು ಮತ್ತು ಹವಾಮಾನ ವೈಪರೀತ್ಯಕ್ಕೆ ಅನುಗುಣವಾಗಿ ಆಯ್ಕೆ ಮಾಡಬಹುದಾದ ಪರ್ಯಾಯ ಬೆಳೆಗಳ ಕುರಿತು ಮಾಹಿತಿ ನೀಡುತ್ತಿದೆ.

ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಳಿಗೆಯಲ್ಲಿ ರೇಷ್ಮೆ ಬೆಳೆಯ ಕುರಿತು ಮಾಹಿತಿ ಒದಗಿಸಲಾಗುತ್ತಿದೆ. ರೇಷ್ಮೆ ಕೃಷಿಯಲ್ಲಿ ಆಸಕ್ತಿ ಹೊಂದಿರುವ ರೈತರಿಗೆ ಬೆಳೆಯ ವಿಧಾನಗಳು ಮತ್ತು ಅದರ ಮಹತ್ವದ ಕುರಿತು ತಿಳಿದುಕೊಳ್ಳಲು ಇದು ಸಹಕಾರಿಯಾಗಿದೆ.

ಕೃಷಿ ವಸ್ತು ಪ್ರದರ್ಶನದ ಉದ್ಘಾಟನಾ ಸಂದರ್ಭದಲ್ಲಿ ಸಚಿವರಾದ ಟಿ.ಎಂ. ನರೇಂದ್ರಸ್ವಾಮಿ, ಶಿವಲಿಂಗೇಗೌಡ ಹಾಗೂ ಬಸವಂತಪ್ಪ ಉಪಸ್ಥಿತರಿದ್ದರು.

ರೈತರಿಗೆ ಜ್ಞಾನ, ತಂತ್ರಜ್ಞಾನ ಮತ್ತು ಹೊಸ ಸಾಧ್ಯತೆಗಳ ವೇದಿಕೆ: ರೈತ ದಸರಾ ಅಂಗವಾಗಿ ಆಯೋಜಿಸಿರುವ ಕೃಷಿ ವಸ್ತು ಪ್ರದರ್ಶನವು ಕೇವಲ ಕೃಷಿ ಉತ್ಪನ್ನಗಳ ಪ್ರದರ್ಶನಕ್ಕೆ ಸೀಮಿತವಾಗಿಲ್ಲ. ದೇಶಿ ಜಾನುವಾರು ತಳಿಗಳ ಸಂರಕ್ಷಣೆ, ವೈಜ್ಞಾನಿಕ ಪಶುಸಂಗೋಪನೆ, ಸಿರಿಧಾನ್ಯಗಳ ಪ್ರಾಮುಖ್ಯತೆ, ಕೃಷಿ ಯಾಂತ್ರೀಕರಣ, ಪರ್ಯಾಯ ಬೆಳೆ ಪದ್ಧತಿ ಹಾಗೂ ಕೃಷಿ ಅರಣ್ಯದಂತಹ ವಿಷಯಗಳ ಕುರಿತು ಅರಿವು ಮೂಡಿಸುವ ಪ್ರಯತ್ನವೂ ಇಲ್ಲಿ ಕಂಡುಬರುತ್ತಿದೆ.

ಆಧುನಿಕ ಯಂತ್ರೋಪಕರಣ, ಸಿರಿಧಾನ್ಯಗಳಿಗೆ ಆದ್ಯತೆ

ಕೃಷಿ ವಸ್ತು ಪ್ರದರ್ಶನದಲ್ಲಿ ಸಿರಿಧಾನ್ಯಗಳು ಮತ್ತು ಆಧುನಿಕ ಕೃಷಿ ಯಂತ್ರೋಪಕರಣಗಳಿಗೂ ವಿಶೇಷ ಆದ್ಯತೆ ನೀಡಲಾಗಿದೆ. ಕೃಷಿ ಕಾರ್ಯಗಳನ್ನು ಸುಲಭಗೊಳಿಸುವ ಯಂತ್ರಗಳ ಪರಿಚಯದ ಜೊತೆಗೆ ಭತ್ತ ಹಾಗೂ ಕಬ್ಬು ನಾಟಿ ಯಂತ್ರಗಳ ಪ್ರದರ್ಶನವೂ ರೈತರ ಗಮನ ಸೆಳೆಯುತ್ತಿದೆ. ಕೃಷಿ ಕ್ಷೇತ್ರದಲ್ಲಿ ಯಾಂತ್ರೀಕರಣದ ಮಹತ್ವ ಹೆಚ್ಚುತ್ತಿರುವ ಸಂದರ್ಭದಲ್ಲಿ, ಇಂತಹ ಪ್ರದರ್ಶನಗಳು ರೈತರಿಗೆ ಹೊಸ ತಂತ್ರಜ್ಞಾನಗಳ ಪರಿಚಯ ಮಾಡಿಕೊಡುವುದರ ಜತೆಗೆ ಕೃಷಿ ಕಾರ್ಯಗಳಲ್ಲಿ ಸಮಯ ಮತ್ತು ಶ್ರಮವನ್ನು ಉಳಿಸುವ ವಿಧಾನಗಳ ಕುರಿತು ತಿಳಿದುಕೊಳ್ಳಲು ನೆರವಾಗುತ್ತವೆ.

ರಾಜ್ಯಾದ್ಯಂತ ನೇಗಿಲಯೋಗಿ ಪ್ರಾಯೋಗಿಕ ಅನುಷ್ಠಾನ

ಕೃಷಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಹೇಳಿಕೆ

■ **ವಿಕ ಸುದ್ದಿಲೋಕ** ಮೈಸೂರು

ನೇಗಿಲಯೋಗಿ ಯೋಜನೆ ಪ್ರಾಯೋಗಿಕವಾಗಿ ಪ್ರತಿ ಜಿಲ್ಲೆಯ 2 ತಾಲೂಕುಗಳಲ್ಲಿ ಜಾರಿಗೆ ತರಲಾಗಿದ್ದು, ಮುಂದಿನ ವರ್ಷದಿಂದ ಎಲ್ಲ ತಾಲೂಕುಗಳಿಗೂ ವಿಸ್ತರಿಸಲಾಗುವುದು ಎಂದು ಕೃಷಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.



ರೈತ ದಸರಾ, ಪ್ರಗತಿಪರ ರೈತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ''ಈ ಯೋಜನೆ 3 ಎಕರೆಗಿಂತ ಕಡಿಮೆ ಕೃಷಿ ಭೂಮಿ ಹೊಂದಿರುವ ರೈತರಿಗೆ ನೆರವಾಗಲಿದೆ. ಬರದಲ್ಲಿ ಅಲ್ಪಾವಧಿ ಬೆಳೆಗಳ ಬೀಜೋತ್ಪಾದನೆ ಸಂಶೋಧನೆಗಾಗಿ ವಿವಿಗಳಲ್ಲಿ ಸಂಶೋಧನೆ ಮಾಡಿಸಲಾಗುತ್ತಿದೆ. ಆಧುನಿಕ ಕೃಷಿ ಪದ್ಧತಿಯಿಂದ ಬದಲಾವಣೆ ತರುವುದು ನನ್ನ ಉದ್ದೇಶ,'' ಎಂದು ಹೇಳಿದರು.

''ರಾಜ್ಯದಲ್ಲಿ ಭೀಕರ ಬರಗಾಲದ ಮಧ್ಯೆಯೂ ರೈತ ದಸರಾವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಇದು ರೈತರ ಬೆವರಿನ ಪ್ರತಿಫಲದ ಸಂಭ್ರಮ. ಬರವಿದೆ ಎಂದು ಭಯಪಡಬೇಡಿ. ನಮ್ಮ ಸರಕಾರ ನಿಮ್ಮ ಜತೆಗೆ ಸದಾ ಇರಲಿದೆ. ಈಗಾಗಲೇ ಮೊದಲ ಹಂತದ ಬರ ಪರಿಹಾರ ನೀಡಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಪರಿಹಾರ ನೀಡಲಿದ್ದೇವೆ,'' ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ''ಎಷ್ಟೇ ಮುಂದುವರಿದ ದೇಶವಾದರೂ ಕೃಷಿ ನಿರ್ಲಕ್ಷಿಸಿದರೆ ಆ ದೇಶ ಅಭಿವೃದ್ಧಿ ಹೊಂದುವುದಿಲ್ಲ. ಮಾನವ ಸಂಕುಲ ಬದುಕಬೇಕೆಂದರೆ ಆಹಾರ ಬೇಕು,'' ಎಂದರು.

ಪ್ರಗತಿಪರ ರೈತರಿಗೆ ಸನ್ಮಾನ: ರೈತ ದಸರಾ ಕಾರ್ಯಕ್ರಮದಲ್ಲಿ ಸಮಗ್ರ ಕೃಷಿಯಲ್ಲಿ ಗೋಪಾಲಪುರದ ಅಭಿಲಾಷ್, ಚಿನ್ನಂಬಳ್ಳಿಯ ರಂಗನಾಥ್, ತೋಟಗಾರಿಕೆಯಲ್ಲಿ ಹೊರಳ ಹಳ್ಳಿಯ ಲೋಕೇಶ್, ಕೊಡಸೀಗೆಯ ಚೇತನ. ಕೆ.ಎಂ, ಪಶುಸಂಗೋಪನೆಯಲ್ಲಿ ಕೊಡಗಳ್ಳಿಯ ನಂಜಪ್ಪ, ಬಿಳಿಮಾದನಹಳ್ಳಿಯ ಪರಮೇಶ್ವರಿ, ಬಿ.ಮಟಕೆರೆಯ ಅರುಂಧತಿ, ರೇಷ್ಮೆ ಕೃಷಿಯಲ್ಲಿ ಹಿಟ್ನೇ ಹೆಬ್ಬಾಗಿಲಿನ ಚಂದ್ರೇಗೌಡ, ಮೀನುಗಾರಿಕೆಯಲ್ಲಿ ಬಿ.ಸಿ.ಹಳ್ಳಿಯ ಎಚ್.ಬಿ.ಸುಶೀಲಾ, ದೇವಲಾಪುರ ರತ್ನ ಗೋಣಹಳ್ಳಿಯ ನಿಂಗಮ್ಮ, ಚನ್ನಕಾಲ್ ಕಾವಲಿನ ಜಯಮ್ಮ, ಕೃಷಿಯಲ್ಲಿ ಹೊಸಕೋಟೆಯ ಆರ್.ಪುಷ್ಪಲತಾ, ಅಗ್ರಹಾರ ಗ್ರಾಮದ ಕೌಶಲ್ಯಬಾಯಿ, ಹುರುಳಿ ಕಾಮೇನಹಳ್ಳಿಯ ಸಿ.ಎನ್.ಪೂರ್ಣಿಮಾ, ಅರಣ್ಯ ಕೃಷಿಯಲ್ಲಿ ಅಂತರಸಂತೆಯ ಫಯಾಜ್ ಹಾಗೂ ಹೊಸ ಬೀರ್ವಾಳು ಗ್ರಾಮದ ಸಿದ್ದರಾಜು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಯಂತ್ರೋಪಕರಣಗಳ ಪ್ರದರ್ಶನ: ಮೆರವಣಿಗೆಯಲ್ಲಿ ವಿದ್ಯುತ್ ಚಾಲಿತ ಟ್ರ್ಯಾಕ್ಟರ್, ಮುಸುಕಿನ ಜೋಳ ಸೈಲೇಜ್ ಟಾಪರ್ ಯಂತ್ರ, ಭತ್ತದ ನಾಟಿ ಯಂತ್ರ ಇತ್ಯಾದಿ ಯಂತ್ರಗಳು ಹಾಗೂ ಎತ್ತಿನಗಾಡಿಗಳು, ಹಳ್ಳಕಾರ್ ಎತ್ತುಗಳು, ಬಂಡೂರು ಕುರಿಗಳು, ಉದ್ದ ಕಿವಿ ಮೇಕೆಗಳು ಗಮನ ಸೆಳೆದವು.

ಮೆರವಣಿಗೆಗೆ ಕೃಷಿ ಸಚಿವರಿಂದ ಚಾಲನೆ

ರೈತ ದಸರಾ ಅಂಗವಾಗಿ ಮೈಸೂರಿನಲ್ಲಿ ಆಯೋಜಿಸಿದ್ದ ಮೆರವಣಿಗೆಯಲ್ಲಿ ಸಾಲು ಸಾಲು ಎತ್ತಿನಗಾಡಿ, ನಾನಾ ಜಾನಪದ ಕಲಾತಂಡಗಳು, ಕೃಷಿ ಯಂತ್ರೋಪಕರಣಗಳ ಜತೆಗೆ ಸ್ತಬ್ಧಚಿತ್ರಗಳು ಕೃಷಿ ಬದುಕು ಬಿಂಬಿಸಿದವು. ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಕೃಷಿ ಸಚಿವ ಪಿ.ಎಂ. ನರೇಂದ್ರಸ್ವಾಮಿ ಚಾಲನೆ ನೀಡಿದರು.

V-karnataka pg 05

ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರವೇ ಹೆಚ್ಚು

• ದೊಡ್ಡಬಳ್ಳಾಪುರ: ಕೃಷಿ ಕ್ಷೇತ್ರದಲ್ಲಿ ಬಿತ್ತನೆಯಿಂದ ಧಾನ್ಯ ಸಂಗ್ರಹಣೆಯವರೆಗೆ ರೈತ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕಿ ಬಿ.ಟಿ. ವಿನೋದಮ್ಮ ಹೇಳಿದರು.

ನಗರದ ಕೃಷಿ ಇಲಾಖೆ ಆವರಣದಲ್ಲಿ ಆತ್ಮ ಯೋಜನೆಯಡಿ ಆಯೋಜಿಸಿದ್ದ ಮಹಿಳಾ ಕಿಸಾನ್ ದಿವಸ್ ಹಾಗೂ ಕಿಸಾನ್ ಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ವಹಿಸುತ್ತಿರುವ ನಿರ್ಣಾಯಕ ಪಾತ್ರವನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಮಹಿಳಾ ಕಿಸಾನ್ ದಿವಸ್ ಆಚರಿಸಲಾಗುತ್ತಿದೆ ಎಂದರು. ಪ್ರಗತಿಪರ ರೈತ ಮಹಿಳೆ ಪದ್ಮಿನಿಗೌಡ ಮಾತನಾಡಿ, ರೈತರು ಕೃಷಿಯೊಂದಿಗೆ ಮೌಲ್ಯವರ್ಧನೆ, ನಾಟಿ ಕೋಳಿ ಸಾಕಾಣಿಕೆ ಹಾಗೂ ಅಣಬೆ ಬೇಸಾಯದಂತಹ ಉಪಕಸುಬುಗಳನ್ನು ಕೈಗೊಂಡು ಉತ್ತಮ ಆದಾಯ ಗಳಿಸಬೇಕು.

ವಿವಿಧ ಇಲಾಖೆಗಳ ಯೋಜನೆಗಳ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಗೋಪಿಕಾ ಮಾತನಾಡಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಿಂದ ರೈತ ಮಹಿಳೆಯರು ಹೆಚ್ಚಿನ ಆದಾಯ ಗಳಿಸಬಹುದು ಎಂದರು. ಪಿಎಂಎಫ್‌ಎಂಇ ಯೋಜನೆಯ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಅನಿಲ್ ಯೋಜನೆಯ ಕುರಿತು ಮಾಹಿತಿ ನೀಡಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಸನ್ನಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿ ಸತೀಶ್ ಮಾತನಾಡಿ, ಕೃಷಿ, ಹೈನುಗಾರಿಕೆ ಮತ್ತು



ಪಶುಸಂಗೋಪನೆಯಲ್ಲಿ ರೈತ ಮಹಿಳೆಯರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು. ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಪ್ರಭಾಕರ್ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ವಿವಿಧ ಉಪಕಸುಬುಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಂಗವಾಗಿ ತಾಲ್ಲೂಕಿನ ಪ್ರಗತಿಪರ ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಗೋಪಿಕಾ, ಡಾ. ಗೋಪಾಲ್, ತೋಟಗಾರಿಕೆ ಇಲಾಖೆಯ ಅಧಿಕಾರಿ ಶಶಿಕಲಾ, ಪಶುಸಂಗೋಪನಾ ಇಲಾಖೆಯ ಡಾ. ಕುಮಾರಸ್ವಾಮಿ, ಅರಣ್ಯ ಇಲಾಖೆಯ ಅಧಿಕಾರಿ ರಚಿತ್, ರೈತ ಸಂಘದ ಮುಖಂಡರು, ಕೃಷಿ ಅಧಿಕಾರಿಗಳು ಹಾಗೂ ರೈತರು ಭಾಗವಹಿಸಿದ್ದರು.

Hosadiganta Pg 07